

# ಕುಟುಂಬಗಳು ಹೇಗಾಗುತ್ತವೆಂದು ಬಗ್ಗೆ ಮಿಮಿ ಕಲಿತಳು





ಅವಳು ದತ್ತು ಪುತ್ರಿಯೆಂದು ತುಂಟ ಕಾಗೆ ಹೀಯಾಳಿಸಿದ ನಂತರದ ಎರಡು ದಿನಗಳು ಮಿಮಿ ಶಾಲೆಗೆ ಹೋಗಲು ನಿರಾಕರಿಸಿದಳು.
ಅವಳು ದುಃಖಿತಳಾಗಿದ್ದಳು ಹಾಗೂ ಅವಳ ಆಟಿಕೆಗಳೊಂದಿಗೆ ಆಡಲು ಹಾಗೂ ತಿನ್ನಲೂ ಅವಳಿಗೆ ಮನಸ್ಸಿರಲಿಲ್ಲ. ಆ ದಿನಗಳಲ್ಲಿ ಅವಳು ಮೌನವಾಗಿದ್ದು ಯಾರೊಂದಿಗೂ ಮಾತನಾಡಲಿಲ್ಲ.
"ನೀನು ಶಾಲೆಯಲ್ಲಿ ಆದ ವಿಷಯದ ಕುರಿತು ಯೋಚಿಸುತ್ತಾ ಅದೇ ವಿಷಯದ ಕುರಿತಾಗಿಯೇ ದುಃಖಿಸುತ್ತಿದ್ದೀಯಾ ಎಂದು ನನಗೆ ಅನ್ನಿಸುತ್ತಿದೆ" ಎಂದು ಅಪ್ಪ ಹೇಳಿದರು.
"ನೀನು ನಿನ್ನ ಕೆಲವು ಯೋಚನೆಗಳು ಹಾಗೂ ಗೊಂದಲಗಳ ಕುರಿತು ನಮಗೆ ಹೇಳಬಹುದು....ನಾವು ಏನಾದರೂ ಸಹಾಯ ಮಾಡಬಹುದು."ಎಂದು ಅಮ್ಮ ಸಲಹೆ ನೀಡಿದರು.





"ದತ್ತು ತೆಗೆದುಕೊಳ್ಳುವುದು ಎಂದರೆ ಏನು" "ಅದು ಕೆಟ್ಟ ವಿಷಯವೇ?", ಎಂದು ಮಿಮಿ ಕೇಳಿದಳು.
"ದತ್ತು ಪಡೆಯುವುದು ಎಂದರೆ ನೀನು ನಮ್ಮ ಮಗಳಾಗುವುದು ಹಾಗೂ ನಾವು ನಿನ್ನ ಪೋಷಕರಾಗುವುದು- ಹಾಗೂ ಇದಕ್ಕೆ ನಾವಿಬ್ಬರೂ ಒಪ್ಪಿಕೊಂಡಿರುತ್ತೇವೆ ಏಕೆಂದರೆ ನಾವು ಇದನ್ನು ಇಷ್ಟಪಟ್ಟಿದ್ದೇವೆ, ಹಾಗಾಗಿ ಇದು ಕೆಟ್ಟ ವಿಷಯವೇ ಅಲ್ಲ", ಎಂದರು ಅಪ್ಪ.

"ನಿಜ ಅರ್ಥದಲ್ಲಿ, ಅದು ತುಂಬಾ ಒಳ್ಳೆಯ ಕಾರ್ಯ", ಎಂದರು ಅಮ್ಮ."ಏಕೆಂದರೆ ಒಂದು ಮಗುವನ್ನು ದತ್ತು ತೆಗೆದುಕೊಂಡರೆ, ಒಬ್ಬರಿಗೆ ಒಂದು ಮಗುವಿನ ಪೋಷಕರಾಗುವ ಅವಕಾಶ ಸಿಗುತ್ತದೆ, ಅವರಿಗೆ ಒಂದು ಮಗು ಸಿಗುತ್ತದೆ...ಇದಲ್ಲದೇ ಬೇರೆ ರೀತಿ ಸಾಧ್ಯವಿಲ್ಲ. ನೀನೇ ಯೋಚಿಸು, ಒಂದು ವೇಳೆ ನಿನ್ನನ್ನು ದತ್ತು ತೆಗೆದುಕೊಳ್ಳಲು ಸಾಧ್ಯವಾಗದಿದ್ದರೆ!ನಮಗೆ ತಂದೆ ತಾಯಿಯರಾಗಲು ಸಾಧ್ಯವಿರುತ್ತಿರಲಿಲ್ಲ ಹಾಗಾಗಿ ನಾವು ದುಃಖಿಗಳಾಗುತ್ತಿದ್ದೆವು...ಮತ್ತು ನಿನ್ನ ತಂದೆತಾಯಿಯರಾಗಲು ನಮಗೆ ಬಹಳ ಆಸೆ!"



"ಹಾಗಾದರೆ ಕಾವ್ ಮತ್ತು ಇತರರು ನನಗೆ ಏಕೆ ಹಾಸ್ಯ ಮಾಡುತ್ತಾರೆ?" ಎಂದು ಮಿಮಿ ಕೇಳಿದಳು.
"ಸರಿ, ಕೆಲವರಿಗೆ ದತ್ತು ಪಡೆಯುವುದು ಎಷ್ಟು ಚಂದದ ಕೆಲಸ ಹಾಗೂ ಅದು ಒಂದು ಕುಟುಂಬದಲ್ಲಿ ಎಷ್ಟು ಸಂತೋಷವನ್ನು ತರುತ್ತದೆ ಎಂದು ಅರ್ಥವಾಗುವುದಿಲ್ಲ...ಹಾಗಾಗಿ, ಅವರಿಗೆ ಅದು ಗೊತ್ತಿಲ್ಲ ಎಂದಾಗ, ಅವರು ಅದರ ಬಗ್ಗೆ ತುಂಬಾ ಕೆಟ್ಟ ಭಾವನೆ ತೋರಿಸುತ್ತಾರೆ...ಅವರು ಹಾಗಿರಬಾರದು", ಎಂದಳು ಅಮ್ಮ.



"ಆದರೆ ನಾನು ನಿನ್ನ ಹೊಟ್ಟೆಯಿಂದ ಬಂದವಳಲ್ಲ ಮತ್ತು ನಾನು ನಿನ್ನಂತೆ ಇಲ್ಲ ಎಂದು ಶಾಲೆಯಲ್ಲಿ ಅವರು ಹೇಳಿದರು" ಎಂದು ದುಃಖದಿಂದ ಮಿಮಿ ಹೇಳಿದಳು.

"ಮಕ್ಕಳು ಕುಟುಂಬದೊಳಗೆ ಹಲವು ರೀತಿಯಿಂದ ಬರಬಹುದು", ಮಮ್ಮಿ ವಿವರಿಸಿದರು. "ಕೆಲವರು ತಮ್ಮ ಅಮ್ಮನ ಹೊಟ್ಟೆಯಲ್ಲಿ ಹುಟ್ಟುತ್ತಾರೆ. ಇತರರು ಒಂದು ಮನೆಯಿಂದ ದತ್ತು ಆಗುತ್ತಾರೆ..ನಿನ್ನಂತೆ ಏಕೆಂದರೆ ನಿನ್ನನ್ನು ಹೆತ್ತ ತಂದೆ ತಾಯಿಗಳು ನಿನ್ನನ್ನು ನೋಡಿಕೊಳ್ಳಲು ಇಲ್ಲ".

"ಆದರೆ ಮಕ್ಕಳು ಹೇಗೆ ಒಂದು ಕುಟುಂಬಕ್ಕೆ ಬರುತ್ತಾರೆ ಅಥವಾ ಅವರು ತಮ್ಮ ತಮ್ಮ ಪೋಷಕರಂತೆ ಕಾಣುತ್ತಾರಾ ಎಂಬುದು ಮುಖ್ಯವಲ್ಲ...ಒಮ್ಮೆ ಅವರು ಒಂದು ಕುಟುಂಬದಲ್ಲಿ ಬಂದರು ಎಂದಾದರೆ ಅಲ್ಲಿಗೇ ಅವರು ಸೇರುತ್ತಾರೆ ಏಕೆಂದರೆ ಅವರ ಈಗಿನ ತಂದೆ ತಾಯಿಗಳಿಗೆ ಅವರು ಬೇಕಿರುತ್ತಾರೆ ಮತ್ತು ಮಕ್ಕಳನ್ನು ಅವರು ಪ್ರೀತಿಸುತ್ತಾರೆ....ನೀನು ಎಲ್ಲಿಂದ ಬಂದೆ ಹಾಗೂ ನೀನು ಮೊಲದಂತೆ ಇದ್ದೀ ಹಾಗೂ ಜಿರಾಫೆಯಂತೆ ಇಲ್ಲ ಎಂಬುದು ನಮಗೆ ಮುಖ್ಯವಾಗುವುದಿಲ್ಲ...ನೀನು ಈಗ ನಮ್ಮ ಮಗು, ನಮ್ಮ ಕುಟುಂಬದ ಒಂದು ಭಾಗ ಹಾಗೂ ನಾವು ನಿನ್ನನ್ನು ಪ್ರೀತಿಸುತ್ತೇವೆ ಎಂಬುವುದೇ ಈಗ ಮುಖ್ಯ", ಎಂದರು ಅಪ್ಪ.




"ಒಂದು ದಿನ ನಿಮಗೆ ನಾನು ಬೇಡವಾದರೆ ಏನು ಮಾಡುವುದು?ಆಗ ನೀವು ನನ್ನನ್ನು ಮತ್ತೆ ಮಿಸೆಸ್ ಬೇರ್ ಬಳಿ ವಾಪಾಸು ಕಳುಹಿಸುತ್ತೀರಾ?" ಎಂದು ಮಿಮಿ ಚಿಂತೆಯಿಂದ ಕೇಳಿದಳು.

"ಮಿಮಿ,ನೀನು ಏನೇ ಮಾಡಿದರೂ ನೀನು ನಮ್ಮ ಮಗಳು...ನಾವು ನಿಮ್ಮನ್ನು ಮಿಸೆಸ್ ಬೇರ್ ಮನೆಗೆ ವಾಪಾಸು ಕೊಡುವುದೇ ಇಲ್ಲ." ಎಂದಳು ಅಮ್ಮ.

"ಇದು ನಿನ್ನ ಮನೆ ಹಾಗೂ ನೀನು ಇಲ್ಲಿರಲು ಬಂದಿದ್ದೀ.ನಾವು ನಿನ್ನನ್ನು ಪ್ರೀತಿಸುತ್ತೇವೆ ಹಾಗೂ ಯಾವಾಗಲೂ ನಿನ್ನ ತಾಯಿ ತಂದೆಯರಾಗಲು ಇಷ್ಟಪಡುತ್ತೇವೆ."ಎಂದರು ಅಪ್ಪ.



ತನ್ನ ತಂದೆ ತಾಯಿ ಹೇಳಿದ ಮಾತಿನಿಂದ ಮಿಮಿಗೆ ತುಂಬಾ ಸಮಾಧಾನವಾಯಿತು. ಅವಳು ಮರುದಿನ ಶಾಲೆಗೆ ಹೋಗಲು ನಿರ್ಧರಿಸಿದಳು.
"ನೀನು ಏನೇ ಹೇಳಿದರೂ ನನ್ನ ತಂದೆ ತಾಯಿಗಳು ನಿಜವಾದವರು ಹಾಗೂ ನಾನು ಅವರ ಮಗಳು. ಕಾವ್.. ನಿನಗೆ ದತ್ತು ಪಡೆದುಕೊಳ್ಳುವುದರ ಮಜಾ ಹಾಗೂ ಹೊಸ ಕುಟುಂಬದ ರಚನೆ ಹೇಗೆ ಆಗುತ್ತದೆ ಎಂಬುದೂ ಗೊತ್ತಿಲ್ಲ! ನೀನು ಇನ್ನೊಮ್ಮೆ ನನಗೆ ಈ ರೀತಿ ತಮಾಷೆ ಮಾಡಿದರೆ, ನೀನು ಎಷ್ಟು ಕೆಟ್ಟವನು ಹಾಗೂ ತಂಟೆಕೋರ ಎಂದು ನನ್ನ ಶಿಕ್ಷಕರ ಬಳಿ ಹೇಳುತ್ತೇನೆ" ಎಂದು ಮಿಮಿ ಕಾವ್‌ಗೆದೃಢವಾಗಿ ಹೇಳಿದಳು.

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ, ಬೆಂಗಳೂರು-560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್